ಹುಬ್ಬಳ್ಳಿ ಧಾರವಾಡ ಬೈಪಾಸ್ ರಸ್ತೆ ಕಾಮಗಾರಿ

187 (508) ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆ ಎಂದು ಮಂಜೂರಾಗಿದೆ ಇದಕ್ಕೆ ಈವರೆಗೆ ತಗಲಿದ ಖರ್ಚು ಎಷ್ಟು?

ಆ) ಸದರಿ ರಸ್ತೆ ಇನ್ನು ಎಷ್ಟು ದಿವಸಗಳಲ್ಲಿ ಮುಗಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು) :

ಅ) ಹುಬ್ಬಳ್ಳಿ - ಧಾರವಾಡ ಹೊರ ರಸ್ತೆಯ ಮೊದಲನೇ ಹಂತ (ಕಿ.ಮೀ. 12.47 ರಿಂದ 20.90 ವರೆಗೆ) 1987 ರಲ್ಲಿ ಮಂಜೂರಾಗಿದೆ. ಹಾಗೂ ಇದುವರೆಗೆ 4.96 ಕೋಟಿ ರೂ. ಗಳು ಖರ್ಚಾಗಿದೆ.

ಆ) ಪ್ರಥಮ ಹಂತದ ಉಳಿಕೆ ಕಾಮಗಾರಿ ಹಾಗೂ 2ನೇ ಹಂತದ ಕಾಮಗಾರಿ (ಒಟ್ಟು 29.90 ಕಿ.ಮೀಗಳು) ಖಾಸಗಿ ಸಂಸ್ಥೆಯವರೊಂದಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕರಾರನ್ನು ಮಾಡಿಕೊಂಡಿದ್ದು ಇಡೀ ಕಾಮಗಾರಿಯನ್ನು ನವೆಂಬರ್ 2000 ರಲಿ ಪೂರೈಸಲಾಗುವುದು.

ಹಾವೇರಿ ಜಿಲ್ಲೆ ಸವಣೂರ ತಾಲ್ಲೂಕಿನಲ್ಲಿ ಗ್ರಾಮೀಣ ಪಶುಚಿಕಿತ್ಸಾಲಯ ಮಂಜೂರು ಮಾಡುವುದು

188 (451) ಶ್ರೀ ಮಂಜುನಾಥ.ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹಾವೇರಿ ಸವಣೂರು ತಾಲ್ಲೂಕು ಹೀರೇಮುಗದೂರ ಗ್ರಾಮಕ್ಕೆ (ಆರ್‌ವಿಡಿ) ಗ್ರಾಮೀಣ ಪಶುಚಿಕಿತ್ಸಾಲಯ ಮಂಜೂರು ಮಾಡಲಾಗುವುದೇ;

ಆ) 1996-97 ಹಾಗೂ 1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಪಶುಚಿಕಿತ್ಸಾಲಯ ಮಂಜೂರು ಮಾಡಲಾಗಿದೆಯೇ (ವಿವರ ನೀಡುವುದು)?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಪಶುವೈದ್ಯ ಸಂಸ್ಥೆಗಳನ್ನು ತಾಲ್ಲೂಕುಗಳಲ್ಲಿನ 1990ರ ಜಾನುವಾರು ಗಣತಿಯನುಯ್ನ ಆಧರಿಸಿ ಪ್ರಾರಂಭಿಸಲಾಗುತ್ತಿತ್ತು. ಇತ್ತೀಚೆಗೆ ರಾಜ್ಯದಲ್ಲಿ ಜಾನುವಾರು ಗಣತಿಯನ್ನು ನಡೆಸಲಾಗಿದೆ. ಅಂತಿಯ ವರದಿ ಬಂದ ನಂತರ ಹೊಸ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) 1996-97 ನೇ ಸಾಲಿನಲ್ಲಿ 100 ಹೊಸ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಹಾಗೂ 100 ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿದೆ. (ವಿವರ ಅನುಬಂಧದಲ್ಲಿ ನೀಡಿದೆ 1997-98ನೇ ಸಾಲಿನಲ್ಲಿ ಯಾವುದೇ ಹೊಸ ಪಶು ವೈದ್ಯಕೀಯ ಸಂಸ್ಥೆಗಳನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿರುವುದಿಲ್ಲ.

ಅನುಬಂಧ

1996-97 ನೇ ಸಾಲಿನಲ್ಲಿ ಮಂಜೂರಾದ 100 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಹಾಗೂ 100 ಪಶುಚಿಕಿತ್ಸಾಲಯಗಳ ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರಗಳು

ಕ್ರಮ ಸಂಖ್ಯೆ	ಸ್ಥಳ	ತಾಲ್ಲೂಕು	ಜಿಲ್ಲೆ
1	2	3	4
	ಎ) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು :		
1.	ಬರಡನಹಳ್ಳಿ	ಕನಕಪುರ	ಬೆಂಗಳೂರು ಗ್ರಾಮಾಂತರ
2.	ಶ್ರೀಗಿರಿಪುರ	ಮಾಗಡಿ	ಬೆಂಗಳೂರು ಗ್ರಾಮಾಂತರ
3.	ಗಂಡರಗೂಳಿಪುರ	ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮಾಂತರ
4.	ತುಂಬೀನಹಳ್ಳಿ	ರಾಮನಗರ	ಬೆಂಗಳೂರು ಗ್ರಾಮಾಂತರ
5.	ಕುಂದಾಣ	ದೇವನಹಳ್ಳಿ	ಬೆಂಗಳೂರು ಗ್ರಾಮಾಂತರ
6.	ವಿರೂಪಾಕ್ಷಿಪುರ	ಚನ್ನಪಟ್ಟಣ	ಬೆಂಗಳೂರು ಗ್ರಾಮಾಂತರ
7.	ಜಕ್ಕೂರು	ಮಾಗಡಿ	ಬೆಂಗಳೂರು ಗ್ರಾಮಾಂತರ
8.	ಗೂಳೂರು	ತುಮಕೂರು	ತುಮಕೂರು
9.	ಹೀರೇಹಳ್ಳಿ	ತುಮಕೂರು	ತುಮಕೂರು
10.	ತಗ್ಗಿಹಳ್ಳಿ	ಮಧುಗಿರಿ	ತುಮಕೂರು
11.	ಕೆಸ್ತೂರು	ತುಮಕೂರು	ತುಮಕೂರು
12.	ಸೋಮಲಾಪುರ	ಗುಬ್ಬಿ	ತುಮಕೂರು
13.	ಹುಲ್ಲೇಕೆರೆ	ತುರುವೇಕರೆ	ತುಮಕೂರು
14.	ದಾವನದ ಹೊಸಳ್ಳಿ	ಚಿಕ್ಕನಾಯಕನ ಹಳ್ಳಿ	ತುಮಕೂರು
15.	ಅಲವಟ್ಟಿ	ಶ್ರೀನಿವಾಸಪುರ	ಕೋಲಾರ
16.	ನೂಟವೆ	ಮಾಲೂರು	ಕೋಲಾರ
17.	ಪಾತಪಲ್ಲಿ	ಮುಳಬಾಗಿಲು	ಕೋಲಾರ
18.	ಶಿರಮಗೊಂಡನಹಳ್ಳಿ	ದಾವಣಗೆರೆ	ದಾವಣಗೆರೆ
19.	ಮುಸ್ಟೂರು	ಜಗಳೂರು	ದಾವಣಗೆರೆ
20.	ಮದಕರಿಪುರ	ಚಿತ್ರದುರ್ಗ	ಚಿತ್ರದುರ್ಗ
21.	ಮಲ್ಲಪ್ಪನಹಳ್ಳಿ	ಹಿರಿಯೂರು	ಚಿತ್ರದುರ್ಗ
22.	ಗುಂಡೇರಿ	ಹೊಳಕ್ಕೇರಿ	ಚಿತ್ರದುರ್ಗ
23.	ಎಸ್. ನೇರಳೇಕೆರೆ	ಹೊಸದುರ್ಗ	ಚಿತ್ರದುರ್ಗ
24.	ದಿಂಡಾವರ	ಹಿರಿಯೂರು	ಚಿತ್ರದುರ್ಗ
25.	ಹುಣಸೇಕಟ್ಟೆ	ಭದ್ರಾವತಿ	ಶಿವಮೊಗ್ಗ
26.	ತಮ್ಮಡಿಹಳ್ಳಿ	ಹೊಸನಗರ	ಶಿವಮೊಗ್ಗ
27.	ಗುಡ್ಡೇಕೊಪ್ಪ	ತೀರ್ಥಹಳ್ಳಿ	ಶಿವಮೊಗ್ಗ

28.	ಸನ್ಯಾಸಿ ಕೊಡಮಗ್ಗಿ	ಭದ್ರಾವತಿ	ಶಿವಮೊಗ್ಗ
29.	ಬಲದಮಾಡಿ-ತೆಂಕಣಾಂಬಿ ಹೋಬಳಿ	ರುಂಡ್ಲುಪೇಟೆ	ಚಾಮರಾಜನಗರ
30	ಕಾವೇರಿಪುರ	ತಿ. ನರಸೀಪುರ	ಮೈಸೂರು
31.	ಗುಂಗ್ರಾಲ್ ಛತ್ರ	ಮೈಸೂರು	ಮೈಸೂರು
32.	ನಾರಾಯಣ ಪುರ	ಕೆ.ಆರ್. ನಗರ	ಮೈಸೂರು
33.	ದೊಡ್ಡಕಮರಹಳ್ಳಿ	ಪಿರಿಯಾಪಟ್ಟಣ	ಮೈಸೂರು
34.	ಚಾಕೋನಹಳ್ಳಿ	ನಾಗಮಂಗಲ	ಮಂಡ್ಯ
35.	ಗೊರವನಹಳ್ಳಿ	ಮದ್ದೂರು	ಮಂಡ್ಯ
36.	ಸಬ್ಬನಕುಪ್ಪೆ	ಶ್ರೀರಂಗಪಟ್ಟಣ	ಮಂಡ್ಯ
37.	ಕೆ. ಬೆಟ್ಟಹಳ್ಳಿ	ಪಾಂಡವಪುರ	ಮಂಡ್ಯ
38.	ಜಬ್ಲೇನಹಳ್ಳಿ	ಕೆ. ಆರ್. ಪೇಟೆ	ಮೈಸೂರು
39.	ಕಾಮಸಮುದ್ರ	ಅರಸೀಕೆರೆ	ಹಾಸನ
40.	ಹರಗು	ಹಾಸನ	ಹಾಸನ
41.	ಹಂಚೂರು	ಆಲೂರು	ಹಾಸನ
42.	ಮಾಯಗೊಂಡನಹಳ್ಳಿ	ಬೇಲೂರು	ಹಾಸನ
43.	ಮೂಡಲಹಿಪ್ಪೆ	ಹೊಳೇನರಸೀಪುರ	ಹಾಸನ
44.	ಗಂಜಲಗೂಡು	ಅರಕಲಗೂಡು	ಹಾಸನ
45.	ಹೊನ್ನಶೆಟ್ಟಿಹಳ್ಳಿ ಗೇಟ್	ಚನ್ನರಾಯಪಟ್ಟಣ	ಹಾಸನ
46.	ಚಿಕ್ಕಬಳೇಕೆರೆ	ಕಡೂರು	ಚಿಕ್ಕಮಗಳೂರು
47.	ಎಮ್ಮೆದೊಡ್ಡಿ	ಕಡೂರು	ಚಿಕ್ಕಮಗಳೂರು
48.	ಗಂಗನಹಳ್ಳಿ	ಕಡೂರು	ಚಿಕ್ಕಮಗಳೂರು
49.	ತಳಹಳ್ಳಿ	ಚಿಕ್ಕಮಗಳೂರು	ಚಿಕ್ಕಮಗಳೂರು
50.	ಬಸಕಲ್	ಚಿಕ್ಕಮಗಳೂರು	ಚಿಕ್ಕಮಗಳೂರು
51.	ಕೆಳಗೂರು	ಚಿಕ್ಕಮಗಳೂರು	ಚಿಕ್ಕಮಗಳೂರು
52.	ಮೂಗ್ತಿಹಳ್ಳಿ	ಚಿಕ್ಕಮಗಳೂರು	ಚಿಕ್ಕಮಗಳೂರು
53.	ಗಡಿಗಿರಿಯ; ಆಪುರ	ತರೀಕೆರೆ	ಚಿಕ್ಕಮಗಳೂರು
54.	ಸೂರಿಂಜೆ	ಮಂಗಳೂರು	ದಕ್ಷಿಣಕನ್ನಡ
55.	ಕುಡ್ತೆಮುಗೇರು	ಬಂಟ್ವಾಳ	ದಕ್ಷಿಣಕನ್ನಡ
56.	ಕಲ್ಲುಗುಡ್ಡೆಸೂಜಿ ಬಾಳಗ್ರಾಮ	ಮತ್ತೂರು	ದಕ್ಷಿಣಕನ್ನಡ
57.	ಮೂಗ್ರು	ಬೆಳ್ತಂಡಿ	ದಕ್ಷಿಣಕನ್ನಡ
58.	ಅಬ್ರಿ	ಕುಂದಾಪುರ	ಉಡುಪಿ
59.	ಕುಚ್ಚೂರು	ಕಾರ್ಕಳ	ಉಡುಪಿ
60.	ಕಡೆಗಾರು	ಉಡುಪಿ	ಉಡುಪಿ
61.	ಕಾಳಾವರ	ಕುಂದಾಪುರ	ಉಡುಪಿ
62.	ಸೂಳೇಬಾವಿ	ಬೆಳಗಾವಿ	ಬೆಳಗಾವಿ

63.	ಡೋಕಲಮರ್ಡಿ	ಬೈಲಹೊಂಗಲ	ಬೆಳಗಾವಿ
64.	ಜಾತ್ರಾಟ್	ಚಿಕ್ಕೋಡಿ	ಬೆಳಗಾವಿ
65.	ತಳಗನಹಟ್ಟಿ	ಗೋಕಾಕ್	ಬೆಳಗಾವಿ
66.	ಕೋಳಿಗುಡ್ಡ	ರಾಯಬಾಗ್	ಬೆಳಗಾವಿ
67.	ಮತ್ತಿಗಟ್ಟಿ	ಕುಂದಗೋಳ	ಧಾರವಾಡ
68.	ಇಂಗಳಗುಂದಿ	ಹಿರೇಕೆರೂರು	ಹಾವೇರಿ
69.	ಅರೆಮಲ್ಲಾಪುರ	ರಾಣೆಬೆನ್ನೂರು	ಹಾವೇರಿ
70.	ಹೊಸಶಿಡೆನೂರು	ಬ್ಯಾಡಗಿ	ಹಾವೇರಿ
71.	ಮಾಗಡಿ	ಶಿರಹಟ್ಟಿ	ಗದಗ
72.	ಶಿರಕೋಳ	ನವಲ್‌ಗುಂದ	ಧಾರವಾಡ
73.	ರಾಜೂರು	ರೋಣ	ಗದಗ
74.	ತಟ್ಟಿಗೇರಿ	ಹಳಿಯಾಳ	ಉತ್ತರಕನ್ನಡ
75.	ಹೊಳಗದ್ದೆ	ಕುಮಟಾ	ಉತ್ತರಕನ್ನಡ
76.	ಶಿರಳಗಿ	ಸಿದ್ದಾಪುರ	ಉತ್ತರಕನ್ನಡ
77.	ಏರ್ವಾ	ಹೊನ್ನಾವರ	ಉತ್ತರಕನ್ನಡ
78.	ಲಾಯದಗುಂಡಿ	ಬಾದಾಮಿ	ಬಾಗಲಕೋಟೆ
79.	ಮರೇಗುದ್ದಿ	ಜಮಖಂಡಿ	ಬಾಗಲಕೋಟೆ
80.	ಚಿಕ್ಕಆದಾಪುರ	ಹುನಗುಂದ	ಬಾಗಲಕೋಟೆ
81.	ಯಲಗೋಡ	ಸಿಂಧಗಿ	ಬಿಜಾಪುರ
82.	ಮಿಣಸಗಿ	ಮುದ್ದೆಬಿಹಾಳ	ಬಿಜಾಪುರ
83.	ದೋಣೂರು	ಬಸವನಬಾಗೇವಾಡಿ	ಬಿಜಾಪುರ
84.	ತಡೋಳ	ಅಳಂದ	ಗುಲ್ಬರ್ಗಾ
85.	ಸಾವಳೇಶ್ವರ	ಅಳಂದ	ಗುಲ್ಬರ್ಗಾ
86.	ಜೀವಣಗಿ	ಚಿತ್ತಾಪುರ	ಗುಲ್ಬರ್ಗಾ
87.	ಏಮಾರ	ಸುರಪುರ	ಗುಲ್ಬರ್ಗಾ
88.	ಜಾಗೀರ್ ಜಾಡಲದಿನ್ನಿ	ದೇವದುರ್ಗ	ರಾಯಚೂರು
89.	ಕುರಕುಂದ	ಮಾನ್ವಿ	ರಾಯಚೂರು
90.	ಯರಡ್ಡೋಣಿ	ಲಿಂಗಸಗೂಡು	ರಾಯಚೂರು
91.	ಮಾದಶಿರವಾರ	ಸಿಂಧನೂರು	ಕೊಪ್ಪಳ
92.	ನವಲಹಳ್ಳಿ	ಕುಷ್ಟಗಿ	ಕೊಪ್ಪಳ
93.	ಸಂಗವಾಳ	ಕುಷ್ಟಗಿ	ಕೊಪ್ಪಳ
94.	ಗುಡ್ಲಾನೂರ ಕಾತರ್ಕಿ	ಕೊಪ್ಪಳ	ಕೊಪ್ಪಳ
95.	ಬಳಗೇರಿ	ಯಲ್ಬುರ್ಗಾ	ಕೊಪ್ಪಳ
96.	ಕುಮಾರಚಿಂಚೋಳಿ	ಬಾಲ್ಕಿ	ಬೀದರ್
97.	ಮುಸ್ತರಿ	ಹುಮ್ನಾಬಾದ್	ಬೀದರ್

98.	ಯಾಕತ್ತೂರಿ	ಬೀದರ್	ಕೊಪ್ಪಳ
99.	ಮುತ್ತುಗದಹಳ್ಳಿ	ತುರುವೇಕೆರೆ	ತುಮಕೂರು
100.	ಕನ್ನೂಡ	ಬಿಜಾಪುರ	ಬಿಜಾಪುರ
	ಬಿ) ಪಶುಚಿಕಿತ್ಸಾಲಯಗಳು :		
1.	ಅಕ್ಕೂರು	ಚನ್ನಪಟ್ಟಣ	ಬೆಂಗಳೂರು ಗ್ರಾಮಾಂತರ
2.	ದೊಡ್ಡಗುಬ್ಬಿ	ಹೊಸಕೋಟೆ	ಬೆಂಗಳೂರು ಗ್ರಾಮಾಂತರ
3.	ಬೈರನಾಯಕನಹಳ್ಳಿ	ನೆಲಮಂಗಲ	ಬೆಂಗಳೂರು ಗ್ರಾಮಾಂತರ
4.	ಹಣಬೆ	ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮಾಂತರ
5.	ರಾವುತನಹಳ್ಳಿ	ಬೆಂಗಳೂರು ಉತ್ತರ	ಬೆಂಗಳೂರು ನಗರ
6.	ನಡುಂಪಲ್ಲಿ	ಚಿಂತಾಮಣಿ	ಕೋಲಾರ
7.	ತೆರ್ನಹಳ್ಳಿ	ಶ್ರೀನಿವಾಸಪುರ	ಕೋಲಾರ
8.	ಅಂಡರ್‌ಸನ್‌ಪೇಟೆ	ಬಂಗಾರುಪೇಟೆ	ಕೋಲಾರ
9.	ಚಂಪಸಂದ್ರ	ಗೌರೀಬಿದನೂರು	ಕೋಲಾರ
10.	ತಿಮ್ಮಂಪಲ್ಲಿ	ಬಾಗೇಪಲ್ಲಿ	ಕೋಲಾರ
11.	ವಾನರಾಶಿ	ಕೋಲಾರ	ಕೋಲಾರ
12.	ಕ್ಯಾಸಂಬಳ್ಳಿ	ಬಂಗಾರುಪೇಟೆ	ಕೋಲಾರ
13.	ಗಿಡ್ನಹಳ್ಳಿ	ಚಿಕ್ಕಬಳ್ಳಾಪುರ	ಕೋಲಾರ
14.	ಮೇಲ್ಕುಂಟಿ	ಶಿರಾ	ತುಮಕೂರು
15.	ಮಣ್ಣಮ್ಮನ ಟೆಂಪಲ್ ಸಾಕ್ಷಿಹಳ್ಳಿ	ಶಿರಾ	ತುಮಕೂರು
16.	ಕೀಲಾರ್	ಕುಣಿಗಲ್	ತುಮಕೂರು
17.	ನರಸಾಪುರ	ಕೋಲಾರ	ಕೋಲಾರ
18.	ಕುನವೆಳಕೆರೆ	ಹರಿಹರ	ದಾವಣಗೆರೆ
19.	ಹಬ್ಬಳಗೆರೆ	ಚನ್ನಗಿರಿ	ದಾವಣಗೆರೆ
20.	ಬಳಲಗೆರೆ	ಚನ್ನಗಿರಿ	ದಾವಣಗೆರೆ
21.	ಸಾಣೇಕೆರೆ	ಚಳ್ಳಕೆರೆ	ಚಿತ್ರದುರ್ಗ
22.	ವೆಂಕಟಾಪುರ	ಮೊಳಕಾಲ್ಮೂರು	ಚಿತ್ರದುರ್ಗ
23.	ಪಿಳ್ಳಂಗೇರೆ	ಶಿವಮೊಗ್ಗ	ಶಿವಮೊಗ್ಗ
24.	ಹೊಸೂಡಿ	ಶಿವಮೊಗ್ಗ	ಶಿವಮೊಗ್ಗ
25.	ಕೂಡ್ಲಿಗೆರೆ	ಭದ್ರಾವಿ	ಶಿವಮೊಗ್ಗ
26.	ನೈದೂರು	ಸಾಗರ	ಶಿವಮೊಗ್ಗ
27.	ಮಾವಲಿ	ಸೊರಬ	ಶಿವಮೊಗ್ಗ
28.	ಕೊರಟಗೆರೆ	ಶಿಕಾರಿಪುರ	ಶಿವಮೊಗ್ಗ
29.	ಹೊನ್ನೂರು	ಯಳಂದೂರು	ಚಾಮರಾಜನಗರ
30.	ಗಣಗಾನೂರು	ಚಾಮರಾಜನಗರ	ಚಾಮರಾಜನಗರ
31.	ನಜರ್‌ಬಾದ್	ಮೈಸೂರು	ಮೈಸೂರು

32.	ಸಿದ್ದರಾಮಸಹುಂಡಿ	ಮೈಸೂರು	ಮೈಸೂರು
33.	ಬೀರಿಹುಂಡಿ	ಮೈಸೂರು	ಮೈಸೂರು
34.	ಮಾನಾಡಹಳ್ಳಿ	ಪಿರಿಯಾಪಟ್ಟಣ	ಮೈಸೂರು
35.	ಕಲ್ಕುಂದಿ	ತಿ. ನರಸೀಪುರ	ಮೈಸೂರು
36.	ಮನಗನಹಳ್ಳಿ	ಹೆಚ್. ಡಿ. ಕೋಟೆ	ಮೈಸೂರು
37.	ಬೆಗ್ಗನಹಳ್ಳಿ	ನಂಜನಗೂಡು	ಮೈಸೂರು
38.	ದೊಡ್ಡಕವಲಂದೆ	ನಂಜನಗೂಡು	ಮೈಸೂರು
39.	ಆಲೂರು	ಚಾಮರಾಜನಗರ	ಚಾಮರಾಜನಗರ
40.	ಬಸಲ್‌ವಾದಿಗ್ರಮ	ಚಾಮರಾಜನಗರ	ಚಾಮರಾಜನಗರ
41.	ರಾವಣಿ	ಮಳವಳ್ಳಿ	ಮಂಡ್ಯ
42.	ಹಿರಿಯಾಲರಮ್ಮ ಗುಡಿ	ಮಂಡ್ಯ	ಮಂಡ್ಯ
43.	ಬಲ್ಲೆಮಾವಟ್ಟಿ	ಮಡಿಕೇರಿ	ಕೊಡಗು
44.	ಕಾಕೋಟು ಪರಡಂಬು	ವೀರಾಜಪೇಟೆ	ಕೊಡಗು
45.	ಕೋಪಂಡವು	ಮಂಗಳೂರು	ದಕ್ಷಿಣ ಕನ್ನಡ
46.	ಅಂಡಿಂಜಿ	ಬೆಳ್ತಂಗಡಿ	ದಕ್ಷಿಣ ಕನ್ನಡ
47.	ಬೈರಂಪಳ್ಳಿ	ಉಡುಪಿ	ಉಡುಪಿ
48.	ಮೂಡು ಮಾರ್ನಾಡು	ಕಾರ್ಕಳ	ಉಡುಪಿ
49.	ಗುಂಬೇವು	ಹೊಳೇನರಸೀಪುರ	ಹಾಸನ
50.	ರಾಗಿಮರೂರು	ಅರಕಲಗೂಡು	ಹಾಸನ
51.	ಕರೆಗೋಡು	ಅರಕಲಗೂಡು	ಹಾಸನ
52.	ಬಲ್ಲೇನಹಳ್ಳಿ	ಬೇಲೂರು	ಹಾಸನ
53.	ದೊಡ್ಡ ಕುಂಚ	ಹೊಳೇನರಸೀಪುರ	ಹಾಸನ
54.	ಮುತ್ತಿಗೇ ಹಿರಾಪಳ್ಳಿ	ಹಾಸನ	ಹಾಸನ
55.	ಚನ್ನೇನಹಳ್ಳಿ	ಚನ್ನರಾಯಪಟ್ಟಣ	ಹಾಸನ
56.	ಸಿದ್ದರಮಠ	ಕೊಪ್ಪ	ಚಿಕ್ಕಮಗಳೂರು
57.	ಬಿಳ್ಳೂರು	ಮೂಡಿಗೆರೆ	ಚಿಕ್ಕಮಗಳೂರು
58.	ಜೋಡಿಲಿಂಗದಹಳ್ಳಿ	ಕಡೂರು	ಚಿಕ್ಕಮಗಳೂರು
59.	ಬಿಸಲೇರಿ	ಕಡೂರು	ಚಿಕ್ಕಮಗಳೂರು
60.	ಪೋಚನಹಳ್ಳಿ	ಕಡೂರು	ಚಿಕ್ಕಮಗಳೂರು
61.	ಅಸೂರು	ಚಿಕ್ಕಮಗಳೂರು	ಚಿಕ್ಕಮಗಳೂರು
62.	ಕನ್ನಾಪುರ	ಮೂಡಿಗೆರೆ	ಚಿಕ್ಕಮಗಳೂರು
63.	ಹಂತೂರು	ಮೂಡಿಗರೆ	ಚಿಕ್ಕಮಗಳೂರು
64.	ಬಿ. ಹೊಸಳ್ಳಿ	ಮೂಡಿಗೆರೆ	ಚಿಕ್ಕಮಗಳೂರು
65.	ನಡುವಾಳ	ಮೂಡಿಗೆರೆ	ಚಿಕ್ಕಮಗಳೂರು
66.	ಕುದುರೆಮುಳ	ಮೂಡಿಗೆರೆ	ಚಿಕ್ಕಮಗಳೂರು

67.	ಬೆಟ್ಟಗೆರೆ	ಮೂಡಿಗೆರೆ	ಚಿಕ್ಕಮಗಳೂರು
68.	ಗಡಿಪಳ್ಳಿ	ತರೀಕೆರೆ	ಚಿಕ್ಕಮಗಳೂರು
69.	ಸುರ್ಲಾಪುರ	ಹುಕ್ಕೇರಿ	ಬೆಳಗಾವಿ
70.	ನಂದಿಹಾಳ	ರಾಮದುರ್ಗ	ಬೆಳಗಾವಿ
71.	ಮಾಂಗೂರ	ಚಿಕ್ಕೋಡಿ	ಬೆಳಗಾವಿ
72.	ಬೈರಾಪುರ	ಹುಕ್ಕೇರಿ	ಬೆಳಗಾವಿ
73.	ಕಟಗೇರಿ	ಅಥಣಿ	ಬೆಳಗಾವಿ
74.	ಬಸರಗಿ	ಸವದತ್ತಿ	ಬೆಳಗಾವಿ
75.	ಅರಳೇಶ್ವರ	ಹಾನಗಲ್	ಧಾರವಾಡ
76.	ಮಂಟೂರ	ಹುಬ್ಬಳ್ಳಿ	ಧಾರವಾಡ
77.	ಚಿಕ್ಕಹಂದಿಗೋಳ	ಗದಗ	ಗದಗ
78.	ಶಿಂಗಟಾಯನಕೆರೆ ತಾಂಡಾ	ಮುಂಡರಗಿ	ಗದಗ
79.	ಲಿಂಗದಾಳ	ಗದಗ	ಗದಗ
80.	ಕಳ್ಳಿಹಾಳ್	ಹಾವೇರಿ	ಹಾವೇರಿ
81.	ಜನಗಾ	ಹಳಿಯಾಳ	ಉತ್ತರಕನ್ನಡ
82.	ಲಾಲಗುಳಿ	ಯಲ್ಲಾಪುರ	ಉತ್ತರಕನ್ನಡ
83.	ಮುಗಳಕೋಡ್	ಮುದ್ದೋಳ	ಬಿಜಾಪುರ
84.	ವಂದಾಲ	ಬಾಗೇವಾಡಿ	ಬಿಜಾಪುರ
85.	ಹಂಜಿಗಿ	ಇಂಡಿ	ಬಿಜಾಪುರ
86.	ಅಚನೂರ	ಬಾಗಲಕೋಟೆ	ಬಾಗಲಕೋಟೆ
87.	ಾತರ್ಕಿ	ಬೀಳಗಿ	ಬಾಗಲಕೋಟೆ
88.	ಗುಡಿಕೇಶ್ವರ	ಚಿಂಚೋಳಿ	ಗುಲ್ಬರ್ಗಾ
89.	ೊಂದಗೂಳಿ	ಜೇವರ್ಗಿ	ಗುಲ್ಬರ್ಗಾ
90.	ಬಿದನೂರ	ಅಫಜಲ್‌ಪುರ	ಗುಲ್ಬರ್ಗಾ
91.	ಪುಟಪಾಕ್	ಯಾದ್‌ಗಿರ್	ಗುಲ್ಬರ್ಗಾ
92.	ಾಯಿದೊಡ್ಡಿ	ರಾಯಚೂರು	ರಾಯಚೂರು
93.	ಮಾಚನೂರು	ಮಾನ್ವಿ	ರಾಯಚೂರು
94.	ಹುಣಸಿಹಾಳ್	ಯಲ್ಬುರ್ಗಾ	ಕೊಪ್ಪಳ
95.	ೊಡುಬಿದರಹಾಳ್	ಶಿರಗುಪ್ಪ	ಬಳ್ಳಾರಿ
96.	ಉತ್ತಂಗಿ	ಹಡಗಲಿ	ಬಳ್ಳಾರಿ
97.	ನಣ್ಣೇನೂರ	ಬಳ್ಳಾರಿ	ಬಳ್ಳಾರಿ
98.	ಂರೇಮಲ್ಲನಕೇರಿ	ಹಡಗಲಿ	ಬಳ್ಳಾರಿ
99.	ಚೆಗ್ಗಾಪುರ	ಔರಾದ್	ಬೀದರ್
100.	ಾಜೋಳ	ಬಸವಕಲ್ಯಾಣ	ಬೀದರ್

ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಐ.ಟಿ.ಐ. ಕಾಲೇಜು ಮಂಜೂರು

189 (449) ಶ್ರೀ ಮಂಜುನಾಥ .ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಖಾಸಗೀ ಐ.ಟಿ.ಐ.ಗಳ ಸಂಖ್ಯೆ ಎಷ್ಟು; ಅವುಗಳಿಗೆ ಅನುದಾನ ಮಂಜೂರು ಮಾಡಲಾಗಿದೆಯೇ;

ಆ) ರಾಜ್ಯದಲ್ಲಿರುವ ಸರ್ಕಾರೀ ಐ.ಟಿ.ಐ.ಗಳ ಸಂಖ್ಯೆ ಎಷ್ಟು;

ಇ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಐ.ಟಿ.ಐ. ಮಂಜೂರು ಮಾಡಲಾಗಿದೆಯೆ?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) 246

ಪ್ರಸ್ತುತ ಸಾಲಿನಲ್ಲಿ 128 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಸಹಾಯಾನುದಾನಕ್ಕೆ ಅರ್ಹವಾಗಿದ್ದು, ಅವುಗಳಲ್ಲಿ 118 ಕೈಗಾರಿಕಾ ತರಬೇತಿ ಸಂಸ್ಥೆಗಳು ಅನುದಾನಕ್ಕೆ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಗಳನ್ವಯ ಪರಿವೀಕ್ಷಣೆ ಮಾಡಿ, ಪರಿಶೀಲಿಸಿ ಅವುಗಳಿಗೆ ಸಹಾಯಾನುದಾನವನ್ನು ಮಂಜೂರು ಮಾಡಲಾಗುವುದು.

ಆ) 67

ಇ) ಇಲ್ಲ

ಹಾವೇರಿ ಹಾಗೂ ಗದಗ ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳ ಸ್ಥಾಪನೆ

190 (507) ಶ್ರೀ ಮಂಜುನಾಥ್ .ಸಿ. ಕುನ್ನೂರ್ : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ರಾಜ್ಯದಲ್ಲಿ ಹಾಗೂ ಧಾರವಾಡ ಜಿಲ್ಲೆ ಪುನರ್ ವಿಂಗಡನೆಯ ನಂತರ 3 ಜಿಲ್ಲೆಗಳಾಗಿದ್ದು, ಹಾವೇರಿ ಗದಗ ಜಿಲ್ಲೆಗಳಲ್ಲಿ ಪ್ರತ್ಯೇಕ ಸಶೇನ್ಸ್ ನ್ಯಾಯಾಲಯ (ಡಿಸ್ಟ್ರಿಕ್ ಕೋರ್ಟ್) ಎಂದು ಪ್ರಾರಂಭ ಮಾಡಲಾಗುವುದು? ಇವುಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಜಿಲ್ಲಾ ಪುನರ್ ವಿಂಗಡನೆಯ ಎಂ ಪವರ್ ಕಮಿಟಿಯು ದಿನಾಂಕ 11 ನೇ ಫೆಬ್ರವರಿ 1998 ರಂದು ನಡೆದ ಸಭೆಯಲ್ಲಿ ರಚಿಸಲಾದ ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಸ್ಥಾಪನೆಯ ವಿಚಾರವನ್ನು ಪರಿಶೀಲಿಸಿದ್ದು, ಹಳೆ ಜಿಲ್ಲೆಯಲ್ಲಿನ ಜಿಲ್ಲಾ ನ್ಯಾಯಾಧೀಶರ ಹುದ್ದೆ ಮತ್ತು ಪೂರಕ ಸಿಬ್ಬಂದಿಯ ಹುದ್ದೆಗಳನ್ನು ಮರು ವಿನ್ಯಾಸ (redeploy) ಮಾಡುವ ಮೂಲಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸ್ಥಾಪಿಸಲು ಹೆಚ್ಚುವರಿ ಹುದ್ದೆಗಳನ್ನು ಮಾತ್ರ ಸೃಜಿಸಲು ಅನುಮತಿ ನೀಡಿದ್ದು,